**ದಿನಾಂಕಃ 03.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ –**

2. ಮೃತ ಸಯದ್ ಮುದಾಸಿರ್ ನನ್ನ ಎರಡನೆಯ ಮಗ. ನನ್ನ ಉಳಿದ ಮಕ್ಕಳಲ್ಲಿ ಸಯದ್ ಮುಜಾಮಿಲ್ ನಿಗೆ ಮದುವೆಯಾಗಿ ಆತ ಪ್ರತ್ಯೇಕ ವಾಸವಿರುತ್ತಾನೆ. ಸಯದ್ ತನ್ವೀರ್ ತನ್ನ ಅಕ್ಕನ ಮನೆಯಲ್ಲಿ ವಾಸವಿರುತ್ತಾನೆ. ಸಯದ್ ಮುಜಾಹಿದ್ ನನ್ನ ಜೊತೆ ವಾಸವಿರುತ್ತಾನೆ. ನಿಮ್ಮ ಮನೆ ಇರುವ ಪ್ರದೇಶದಲ್ಲಿ ಛತ್ರ ಇರುತ್ತದೆ ಎಂದು ಹೇಳಿದ್ದು , ಅದು ನಿಮ್ಮ ಮನೆಯಿಂದ ಎಷ್ಟು ಅಂತರದಲ್ಲಿ ಇರುತ್ತದೆ ಎಂದರೆ ಸಾಕ್ಷಿಯೂ ಅಲ್ಲಿಗೆ ಹೋಗಲು 15 ನಿಮಿಷ ಬೇಕಾಗುತ್ತದೆ ಎಂದು ನುಡಿಯುತ್ತಾರೆ. ಮೃತ ಸಯದ್ ಮುದಾಸಿರ್ ಕಾರ್ಯ ಕೆಲಸ ಮಾಡಿಕೊಂಡಿದ್ದು, ನಿಮ್ಮ ಮನೆಯಲ್ಲಿ ಇರುತ್ತಿರಲಿಲ್ಲ ಎಂದರೆ ಸಾಕ್ಷಿಯೂ ಆತ ಕೆಲಸ ಮುಗಿಸಿಕೊಂಡು ಮನೆಗೆ ಬಂದು ದುಡ್ಡನ್ನು ಕೊಟ್ಟು, ಆತ ಛತ್ರದಲ್ಲಿ ಮಲಗುತ್ತಿದ್ದನು ಎಂದು ನುಡಿಯುತ್ತಾರೆ. ನನ್ನ ಮಗ ಮೃತ ಸಯದ್ ಮುದಾಸಿರ್ ನಿಗೆ ಸುಮಾರು ಜನ ಸ್ನೇಹಿತರು ಇದ್ದು ಎಂದರೆ ಸರಿ.

3. ನಿಮ್ಮ ಮಗನಿಗೆ ಮದ್ಯ ಕುಡಿಯುವ ಅಭ್ಯಾಸ ಇತ್ತೇ ಎಂದರೆ ಸಾಕ್ಷಿಯೂ ಆತ ಮದ್ಯ ಕುಡಿಯತ್ತಿರಲಿಲ್ಲ ಆದರೆ ಸಲ್ಯೂಷನ್ ಕುಡಿಯುತ್ತಿದ್ದನು ಎಂದು ನುಡಿಯುತ್ತಾರೆ. ಸಲ್ಯೂಷನ್ ಕುಡಿದುಕೊಂಡು ಮನೆಯಲ್ಲಿ ಗಲಾಟೆ ಮಾಡುತಿದ್ದು, ಆ ಕಾರಣ ಆತನನ್ನು ಮನೆಗೆ ಸೇರಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಮೃತ ಸಯದ್ ಮುದಾಸಿರ್ ಸಲ್ಯೂಷನ್ ಕುಡಿದುಕೊಂಡು ತನ್ನ ಸ್ನೇಹಿತರ ಜೊತೆ ಗಲಾಟೆ ಮಾಡಿಕೊಂಡು ಇರುತ್ತಿದ್ದ ಎಂದರೆ ಸರಿಯಲ್ಲ. ಮೃತ ಮುದಾಸಿರ್ ಛತ್ರ ಬಿಟ್ಟು ಬೇರೆ ಎಲ್ಲಿ ಮಲಗುತ್ತಿದ್ದ ಎಂದು ನಿಮಗೆ ತಿಳಿದಿರುವುದಿಲ್ಲ ಎಂದರೆ ಸಾಕ್ಷಿಯೂ ಆತ ಛತ್ರದಲ್ಲಿಯೇ ಮಲಗುತ್ತಿದ್ದನು ಎಂದು ನುಡಿಯುತ್ತಾರೆ. ನನ್ನ ಮಗ ಛತ್ರದಲ್ಲಿ ಮಲಗುತ್ತಿದ್ದನ್ನು ನಾನು ನೋಡಿರುತ್ತೇನೆ. ಸದರಿ ಛತ್ರಕ್ಕೆ ಗೇಟು ಇದ್ದು, ಅದಕ್ಕೆ ಬೀಗ ಹಾಕಿರುತ್ತಿದ್ದರು ಎಂದರೆ ಸರಿ.

4. ಪ್ರತಿದಿನ ಛತ್ರಕ್ಕೆ ಹೋಗಿ ನನ್ನ ಮಗ ಮಲಗಿರುತ್ತಾನೆಯೇ ಇಲ್ಲವೇ ಎಂದು ನೋಡಿಕೊಂಡು ಮನೆಗೆ ಹೋಗಿ ಮಲಗಿಕೊಳ್ಳುತ್ತಿದ್ದನು. ನನ್ನ ಮಗ ತೀರಿಕೊಂಡ ಹಿಂದಿನ ದಿನ ಕೂಡ ನನ್ನ ಮಗ ಛತ್ರದಲ್ಲಿ ಮಲಗಿರುವ ಬಗ್ಗೆ ನೋಡಿಕೊಂಡು ಮನೆಗೆ ಹೋಗಿ ಮಲಗಿರುತ್ತೇನೆ. ನನ್ನ ಮಗ ತೀರಿಕೊಳ್ಳುವ ಹಿಂದಿನ ದಿನ ನಾನು ಸುಮಾರು 09.00 ಗಂಟೆಗೆ ಛತ್ರದ ಬಳಿ ಹೋಗಿ ನೋಡಿರುತ್ತೇನೆ.

5. ದೂರನ್ನು ಟೈಪ್ ಮಾಡಲಾಗಿದ್ದು, ಅದನ್ನು ಯಾರು ಮಾಡಿಸಿರುತ್ತಾರೆ ಎಂದರೆ ಸಾಕ್ಷಿಯೂ ಪೊಲೀಸರು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನನಗೆ ಕನ್ನಡ ಓದಲು, ಬರೆಯಲು ಬರುವುದಿಲ್ಲ. ಸದರಿ ದೂರಿನಲ್ಲಿ ಏನು ಬರೆದಿದೆ ಎಂದು ನನಗೆ ತಿಳಿದಿರುವುದಿಲ್ಲ ಎಂದರೆ ಸರಿ.

6. ನಾನು ಪೊಲೀಸರಿಗೆ ದೂರನ್ನು ನೀಡಿರುತ್ತೇನೆ ಎಂದು ಹೇಳಿದ್ದು, ಸದರಿ ದೂರಿನಲ್ಲಿ ದಿ.07.01.2024 ರಂದು ಬೆಳಿಗ್ಗೆ 06.00 ಗಂಟೆಗೆ ಪಕ್ಕದ ಬೀದಿ ಬೀಬಿಜಾ ರವರು ತಮ್ಮ ಮನೆಯ ಬಳಿ ಬಂದು ನನ್ನ ಮಗ ಸಯದ್ ಮುದಾಸಿರ್ ರವರನ್ನು ಛತ್ರದಲ್ಲಿ ಹೊಡೆದು ಬಿಟ್ಟಿರುತ್ತಾರೆ ಎಂದು ಹೇಳಿದರು ಎನ್ನುವ ವಿಚಾರವನ್ನು ಹೇಳಿರುವುದಿಲ್ಲ ಎಂದರೆ ಸಾಕ್ಷಿಯೂ ಪೊಲೀಸರ ಮುಂದೆ ಹೇಳಿರುತ್ತೇನೆ ಎಂದು ನುಡಿಯುತ್ತಾರೆ.

7. ಮುಖ್ಯ ವಿಚಾರಣೆಯಲ್ಲಿ ನಾನು ಛತ್ರಕ್ಕೆ ಹೋದಾಗ ಅಲ್ಲಿ ಆರೋಪಿ ಇದ್ದು, ಇನ್ನೂ 3-4 ಜನ ಇದ್ದರು ಎಂದು ಹೇಳಿದ್ದು, ಅವರು ಯಾರು, ಅವರ ಹೆಸರು ಹೇಳಲು ಬರುತ್ತದೆಯೇ ಎಂದರೆ ಸಾಕ್ಷಿಯೂ ಇಲ್ಲ ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ನಾನು ದೂರಿನಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ, ಅಲ್ಲಿಯೇ ಇದ್ದ ಆರೋಪಿಯನ್ನು ಏನಾಯಿತು ಎಂದು ವಿಚಾರಿಸಿದಾಗ ಆತ ನನ್ನ ಮಗನಿಗೆ 100 ರೂ. ಕೇಳಿದ್ದು , ನನ್ನ ಮಗ ಕೊಡದಿದ್ದ ಕಾರಣ ಆತನನ್ನು ಹೊಡೆದಿರುತ್ತೇನೆ ಎಂದು ಹೇಳಿರುತ್ತಾನೆ ಎಂದು ಸಾಕ್ಷಿ ನುಡಿದಿದ್ದು, ಸದರಿ ವಿಚಾರಗಳನ್ನು ದೂರಿನಲ್ಲಿ ಹೇಳಿರುವುದಿಲ್ಲ ಎಂದರೆ ಸಾಕ್ಷಿಯೂ ಪೊಲೀಸರ ಮುಂದೆ ಹೇಳಿರುತ್ತೇನೆ ಎಂದು ನುಡಿಯುತ್ತಾರೆ.

**S.C.No.105/2025**
**P.W.-1**
**C.W.-1**

8. ಮುಖ್ಯ ವಿಚಾರಣೆಯಲ್ಲಿ ಬಿಬೀಜಾನ್ ರವರು ಬಂದು ಹೇಳಿದ ವಿಚಾರ ಮತ್ತು ನಾನು ಛತ್ರಕ್ಕೆ ಹೋಗಿ ನೋಡಿರುವ ವಿಚಾರ, ಮತ್ತು ಆರೋಪಿ ಹೇಳಿರುವ ವಿಚಾರಗಳು ಯಾವುದನ್ನು ಸಹ ದೂರಿನಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ನಾನು ಛತ್ರಕ್ಕೆ ಹೋಗಿ ನನ್ನ ಮಗನನ್ನು ನೋಡಿದಾಗ ಆತನ ತಲೆಗೆ ಏಟಾಗಿದ್ದು, ಆತ ಮಲಗಿದ್ದ ಸ್ಥಿತಿಯಲ್ಲಿ ಇದ್ದನು ಎಂದು ಹೇಳಿದ್ದು, ಆತನನ್ನು ಮುಟ್ಟಿ ಮಾತನಾಡಿಸಲು ಪ್ರಯತ್ನಿಸಿರುತ್ತೀರಿಯೇ ಎಂದರೆ ಸಾಕ್ಷಿಯೂ ಇಲ್ಲ ಎಂದು ನುಡಿಯುತ್ತಾರೆ. ಬೀಬಿಜಾನ್ ನನಗೆ ಸಂಬಂಧಿಯಾಗಿರುವುದಿಲ್ಲ. 4-5 ಜನರು ಇದ್ದರು ಎಂದು ಹೇಳಿದ್ದು , ಅವರು ಅಲ್ಲದೆ ಇನ್ನೂ 50-60 ಜನ ಇದ್ದರು ಎಂದರೆ ಸಾಕ್ಷಿಯೂ ಇದ್ದರು ಎಂದು ನುಡಿಯುತ್ತಾರೆ. ಅವರ ಹೆಸರುಗಳು ನನಗೆ ಹೇಳಲು ಬರುವುದಿಲ್ಲ .

9. ನನ್ನ ಮಗನ ಸ್ನೇಹಿತರು ಕೂಡ ಸಲ್ಯೂಷನ್ ನ್ನು ಕುಡಿಯುತ್ತಿದ್ದರೇ ಎಂದರೆ ಸಾಕ್ಷಿಯೂ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಮಗನ ಸ್ನೇಹಿತರು ಯಾರು ಮತ್ತು ಎಲ್ಲಿಯವರು ಎಂದು ನನಗೆ ತಿಳಿದಿರುವುದಿಲ್ಲ. ಆರೋಪಿಯನ್ನು ಈ ಮೊದಲು ನೋಡಿರುತ್ತೀರಿಯೇ ಎಂದರೆ ಸಾಕ್ಷಿಯೂ ಆತ ನನ್ನ ಮಗ ಸ್ನೇಹಿತನಾಗಿರುತ್ತಾನೆ, ಆತನ ಮನೆ ನಮ್ಮ ಮನೆಯ ಎದುರುಗಡೆ ಇರುತ್ತದೆ. ಆತನನ್ನು ಬಿಟ್ಟು ಬೇರೆ ಸ್ನೇಹಿತರ ಪರಿಚಯ ಇರುವುದಿಲ್ಲ. ನನ್ನ ಮಗ ಎಲ್ಲಿ ಕೆಲಸಕ್ಕೆ ಹೋಗುತ್ತಾನೆ ಎಂದು ನನಗೆ ತಿಳಿದಿರುವುದಿಲ್ಲ. ಆತನು ಯಾರ ಜೊತೆಗೆ ಕೆಲಸ ಮಾಡುತ್ತಿದ್ದನು ಎಂಬುದು ಸಹ ನನಗೆ ತಿಳಿದಿರುವುದಿಲ್ಲ.

10. ಛತ್ರದಲ್ಲಿ ನನ್ನ ಮಗನ ಮೃತದೇಹ ಬಿದ್ದಿತ್ತು ಎಂದು ಹೇಳಿದ್ದು, ಅಲ್ಲಿ ಬೇರೆ ವಸ್ತುಗಳು ಬಿದಿದ್ದವೆ ಎಂದರೆ ಸಾಕ್ಷಿಯೂ ದೂರದಲ್ಲಿ ಒಂದು ಕಲ್ಲು ಬಿದ್ದಿತ್ತು, ಬೇರೆ ವಸ್ತುಗಳು ಇರಲಿಲ್ಲ ಎಂದು ನುಡಿಯುತ್ತಾರೆ. ನನ್ನ ಮಗ ಹೇಗೆ ತೀರಿಕೊಂಡಿರುತ್ತಾನೆ ಎಂದು ನನಗೆ ವೈಯಕ್ತಿಕವಾಗಿ ತಿಳಿದಿರುವುದಿಲ್ಲ ಎಂದರೆ ಸರಿ. ಪೊಲೀಸರು ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿ ನನಗೆ ವೈಯಕ್ತಿಕವಾಗಿ ತಿಳಿದಿರುವುದಿಲ್ಲ ಎಂದರೆ ಸರಿ. ಅಲ್ಲಿ ಯಾವ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡರು ಎಂದು ನನಗೆ ತಿಳಿದಿರುವುದಿಲ್ಲ ಎಂದರೆ ಸರಿ. ನಿಪಿ.2 ರಲ್ಲಿಯ

ದಾಖಲೆಗೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ಫೋಟೋಗಳನ್ನು ಸೃಷ್ಟಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ.

11. ಘಟನಾ ಸ್ಥಳದಲ್ಲಿ ಆರೋಪಿ ಇರಲಿಲ್ಲ, ಆತ ನನ್ನ ಮುಂದೆ ನನ್ನ ಮಗನಿಗೆ 100 ರೂಪಾಯಿ ಕೇಳಿರುವ ವಿಚಾರ ಮತ್ತು ಅದನ್ನು ಕೊಡದಿದ್ದಕ್ಕೆ ನನ್ನ ಮಗನನ್ನು ಹೊಡೆದಿರುವ ವಿಚಾರ ಯಾವುದನ್ನು ಕೂಡ ಹೇಳಿರುವುದಿಲ್ಲ, ಸದರಿ ವಿಚಾರಗಳನ್ನು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೂರನ್ನು ಪೊಲೀಸರು ತಯಾರಿಸಿದ್ದು, ಅದಕ್ಕೆ ನಾನು ಸಹಿ ಮಾಡಿರುತ್ತೇನೆ, ಅದರಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ ಎಂದರೆ ಸಾಕ್ಷಿಯೂ ಪೊಲೀಸರೆ ದೂರಿಗೆ ಸಹಿ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿಯು ನನ್ನ ಮಗನಿಗೆ ಏನು ಮಾಡಿರುವುದಿಲ್ಲ , ಕೇವಲ ಆರೋಪಿಯ ಹೆಸರು ತಿಳಿದಿದ್ದು , ಆತನ ವಿರುದ್ಧ ಸುಳ್ಳು ಆರೋಪ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.